# ರಾಣಿ-ಪ್ರೀತಿ ಜಮಾನಾ..

ಇತ್ತೀಚೆಗೆ ಅಮಿತಾಭ್ ಬಚ್ಚನ್ ಬರ್ತ್‌ಡೇ ಸಮಾರಂಭದಲ್ಲಿ ಪಾಲ್ಗೊಂಡಿದ್ದ ರಾಣಿ ಮುಖರ್ಜಿ ಮತ್ತು ಪ್ರೀತಿ ಜಿಂಟಾ ಒಂದೇ ಬಣ್ಣದ ದಿರಿಸು ತೊಟ್ಟು ಕ್ಯಾಮೆರಾಕ್ಕೆ ಒಟ್ಟಿಗೆ ಪೋಸ್ ನೀಡಿದ್ದರು. ಅದನ್ನು ಬಿತ್ತರಿಸಿದ ಮಾಧ್ಯಮಗಳು ಇಬ್ಬರನ್ನೂ 90ರ ದಶಕದ ನಟಿಯರು ಎಂದು ಕರೆದುಬಿಟ್ಟವು. ಇದು ಪ್ರೀತಿಯ ಕೋಪಕ್ಕೆ ಕಾರಣವಾಗಿದೆ.

'ಮಾಧ್ಯಮದ ಎಲ್ಲರೂ ರಾಣಿ ಮತ್ತು ನಾನು 90ರ ದಶಕದಿಂದ ಬಂದವರು ಎಂದು ಏಕೆ ಕರೆಯುತ್ತಿದ್ದಾರೋ ಆಶ್ಚರ್ಯವಾಗುತ್ತಿದೆ. ನಾನು ದಿಲ್ ಸೆ, ಸೋಲ್ಜರ್, ಸಂಘರ್ಷ್ ನಂತಹ ಚಿತ್ರಗಳಲ್ಲಿ ನಟಿಸಿದ್ದು 98-99ರಲ್ಲಿ. 2000ನೇ ಇಸವಿ ಬಳಿಕವೇ ನಾನು ಮತ್ತು ರಾಣಿ ಸಿನಿಮಾಗಳಲ್ಲಿ ನಿರಂತರವಾಗಿ ಕಾಣಿಸಿಕೊಂಡಿದ್ದು. ಪ್ರತಿಯೊಬ್ಬರೂ ಈ ದಶಕದ ಲೆಕ್ಕಾಚಾರವನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ ಎಂದು ನನಗನಿಸುತ್ತದೆ. ವಿಚಿತ್ರವಲ್ಲವೇ?' ಎಂದು ರಾಣಿ ವ್ಯಂಗ್ಯದ ದಾಟಿಯಲ್ಲಿ ಮಾಧ್ಯಮಗಳನ್ನು ಟೀಕಿಸಿ ಟ್ವೀಟ್ ಮಾಡಿದ್ದಾಳೆ.

ರಾಣಿ ಕೂಡ ಸಿನಿಮಾ ಬದುಕು ಶುರು ಮಾಡಿದ್ದು 1996ರಲ್ಲಿ ಬಂಗಾಳಿ ಸಿನಿಮಾದ ಮೂಲಕ. 98ರಲ್ಲಿ 'ಕುಚ್ ಕುಚ್ ಹೋತಾ ಹೈ' ಮೂಲಕ ಆಕೆಯ ಬಾಲಿವುಡ್ ಪಯಣ ಆರಂಭವಾಗಿದ್ದು. 2000ದ ಬಳಿಕ ಆಕೆ ಸಾಲು ಸಾಲು ಹಿಟ್ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಳು. 2014ರಲ್ಲಿ 'ಮರ್ದಾನಿ'ಯಲ್ಲಿ ರಾಣಿ ಆ್ಯಕ್ಷನ್ ಪಾತ್ರ ನಿಭಾಯಿಸಿದ್ದಳು. ಅತ್ತ ನಿರ್ಮಾಪಕಿಯಾಗಿ ಒಂದಷ್ಟು ನಷ್ಟ ಅನುಭವಿಸಿದ ಪ್ರೀತಿ, ಸೈಫ್ ಅಲಿ ಖಾನ್‌ನ 'ಹ್ಯಾಪಿ ಎಂಡಿಂಗ್' ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ಬಂದು ಹೋಗಿದ್ದಳು. ಸನ್ನಿ ದೇವಲ್ ಜೊತೆ 'ಭಯ್ಯಾಜಿ ಸೂಪರ್‌ಹಿಟ್' ಚಿತ್ರದಲ್ಲಿಯೂ ಪ್ರೀತಿ ನಟಿಸುತ್ತಿದ್ದಾಳೆ. ಅಲ್ಲದೆ, ಹರ್ ದಿಲ್ ಜೋ ಪ್ಯಾರ್ ಕರೇಗ, ಚೋರಿ ಚೋರಿ ಚುಪ್ಕೆ ಚುಪ್ಕೆ ಮತ್ತು ವೀರ್ ಝರಾ ಚಿತ್ರಗಳಲ್ಲಿ ಇಬ್ಬರೂ ಒಟ್ಟಿಗೆ ತೆರೆ ಹಂಚಿಕೊಂಡಿದ್ದರು. ಹೀಗಿರುವಾಗ ಇಬ್ಬರನ್ನೂ 90ರ ಜಮಾನದ ನಟಿಯರು ಎಂದು ಕರೆದಾಗ ಸಿಟ್ಟು ಬರುವುದು ಸಹಜವೇ. ಪ್ರೀತಿ ಸಾಮಾಜಿಕ ತಾಣದಲ್ಲಿ ತನ್ನ ಆಕ್ರೋಶ ವ್ಯಕ್ತಪಡಿಸಿದ್ದಾಳೆ. ಮಗುವಿನ ನಿರೀಕ್ಷೆಯಲ್ಲಿರುವ ರಾಣಿ ಬಹುಶಃ ಇದರ ಬಗ್ಗೆ ಚಿಂತಿಸುವ ಸ್ಥಿತಿಯಲ್ಲಿಲ್ಲ.





# ಬಿಪಾಶಾ ಮದುವೆ?

ಬಿಪಾಶಾ ಬಸು, ಕರಣ್ ಸಿಂಗ್ ಗ್ರೋವರ್ ಜತೆ ಕದ್ದುಮುಚ್ಚಿ ಡೇಟಿಂಗ್ ಮಾಡುತ್ತಿದ್ದರೂ, ಅದನ್ನು ಎಂದಿಗೂ ಬಹಿರಂಗವಾಗಿ ಒಪ್ಪಿಕೊಂಡಿಲ್ಲ. ಮಾತ್ರವಲ್ಲ, ಅದು ಸುಳ್ಳು ಎಂದೇ ಪ್ರತಿಪಾದಿಸುತ್ತಾ ಬಂದಿದ್ದಾಳೆ. ಆದರೆ ಅವರಿಬ್ಬರು ಒಟ್ಟಿಗಿರುವ ಚಿತ್ರಗಳೇ ಎಲ್ಲವನ್ನೂ ಹೇಳುತ್ತವೆ. ಕೆಲಸದ ವೇಳೆ, ರಜೆಯ ದಿನಗಳಲ್ಲಿ, ಪಾರ್ಟಿಯಲ್ಲಿ ಎಲ್ಲ ಕಡೆಯೂ ಈ ಜೋಡಿ ಜೊತೆ ಜೊತೆಯಲಿ ಕಾಣಿಸಿಕೊಳ್ಳುತ್ತಿವೆ. ಇಬ್ಬರೂ ಸಹಬಾಳ್ವೆ ನಡೆಸುತ್ತಿದ್ದಾರೆ ಎಂದೂ ಕೆಲವರು ಹೇಳುತ್ತಿದ್ದಾರೆ. ಹೀಗಿದ್ದೂ ಬಿಪ್ಸ್ ತನ್ನ ಪ್ರೇಮಗೀತೆಯನ್ನು ಒಪ್ಪಿಕೊಳ್ಳಲು ತಯಾರಿಲ್ಲ. ಈ ನಡುವೆ ಆಕೆ ತನ್ನ ಬದುಕಿನಲ್ಲಿ ಮಹತ್ತರ ಹೆಜ್ಜೆ ಇಡುವ ಸೂಚನೆ ನೀಡಿದ್ದಾಳೆ.

ಕ್ರಿಕೆಟಿಗ ಯುವರಾಜ್ ಸಿಂಗ್ ನಿಶ್ಚಿತಾರ್ಥವಾದ ಬಳಿಕ ಬಿಪಾಶಾ ಆತನಿಗೆ ಶುಭಾಶಯ ಕೋರಿ ಟ್ವೀಟ್ ಮಾಡಿದ್ದಳು. ಅದಕ್ಕೆ ಕೃತಜ್ಞತೆ ಹೇಳಿದ್ದ ಯುವಿ, ಮುಂದಿನ ಸರದಿ ನಿನ್ನದೇ ಎಂದು ಪ್ರತಿಕ್ರಿಯೆ ನೀಡಿದ್ದ. ಅದಕ್ಕೆ, 'ಶೀಘ್ರದಲ್ಲಿಯೇ ನನ್ನ ಸಂಖ್ಯೆ ಕೂಡ ಬರಲಿದೆ' ಎಂದು ಬಿಪಾಶಾ ಹೇಳಿದ್ದಾಳೆ. ಜೊತೆಗೆ ಹಲವಾರು 'ಸ್ಮೈಲಿ'ಗಳನ್ನೂ ಮೂಡಿಸಿದ್ದಾಳೆ. ಇದರರ್ಥ ಆಕೆ ಕೊನೆಗೂ ಹಸೆಮಣೆ ಏರಲು ಸಿದ್ಧತೆ ನಡೆಸಿದ್ದಾಳೆ ಎನ್ನುವುದು ಬಿ-ಟೌನ್ ಗಾಸಿಪ್ ಪ್ರಿಯರ ಊಹೆ.

ಪತ್ನಿ ಜೆನ್ನಿಫರ್ ವಿಂಗೆಟ್‌ಳೊಂದಿಗಿನ ಎರಡು ವರ್ಷದ ದಾಂಪತ್ಯದ ನಂತರ ಕರಣ್ ಆಕೆಯಿಂದ ದೂರವಾಗಿದ್ದ. 'ಅಲೋನ್' ಚಿತ್ರದಲ್ಲಿ ಕರಣ್ ಮತ್ತು ಬಿಪಾಶಾ ಹತ್ತಿರವಾಗಿದ್ದರು. ಅದನ್ನು ಕರಣ್ ಸಹ ಒಪ್ಪಿಕೊಂಡಿದ್ದ. 'ನಾನು ಮತ್ತು ಬಿಪಾಶಾ ಪರಸ್ಪರ ಹತ್ತಿರವಾಗಿದ್ದೇವೆ. ಒಟ್ಟಿಗೆ ಸಮಯ ಕಳೆಯುತ್ತೇವೆ. ಒಟ್ಟಿಗೆ ಕೆಲಸ ಮಾಡುತ್ತೇವೆ ಮತ್ತು ಒಬ್ಬರನ್ನೊಬ್ಬರ ಸಾಂಗತ್ಯವನ್ನು ಎಂಜಾಯ್ ಮಾಡುತ್ತೇವೆ. ಆದರೆ ಇಬ್ಬರೂ ಒಳ್ಳೆಯ ಗೆಳೆಯರು ಮಾತ್ರ' ಎಂದು ಕೊನೆಯಲ್ಲಿ ವಿವರಣೆಯನ್ನೂ ನೀಡಿದ್ದ ಕರಣ್. ಹೀಗಾಗಿ ಮದುವೆ ಕುರಿತು ಕರಣ್ ಕಡೆಯಿಂದ ಯಾವ ಮಾಹಿತಿಯೂ ಬಂದಿಲ್ಲ. ಆದರೆ ಬಿಪಾಶಾ ಟ್ವೀಟ್ ಈ ಕುತೂಹಲ ಮೂಡಿಸಿದೆ.

■ ಅಮಿ